ಈ ದಿನ ದಿನಾಂಕಃ 06-03-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ಶ್ರೀಃ ಟಿ ಎಂ ವಕೀಲರಿಂದಃ**

ಪಿ ಡಬ್ಲ್ಯು 1 ರವರಿಂದ ದಿನಾಂಕಃ 21-07-2022 ರಂದು ನಿಶಾನೆಗೊಳಪಟ್ಟ ನಿಪಿ 1 ರಿಂದ ನಿಪಿ 35 ರವರೆಗಿನ ದಾಖಲೆಗಳನ್ನು ಪಿಡಬ್ಲ್ಯು 4 ರವರು ತಮ್ಮ ಪರವಾಗಿ ನಿಶಾನೆಗೊಳಿಸಲು ಪ್ರಾರ್ಥಿಸಿದ್ದು ಅನುಮತಿಸಲಾಗಿರುತ್ತದೆ.

**ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ನಾನು ದ್ವಿತೀಯ ಪಿ ಯು ಸಿ ವ್ಯಾಸಾಂಗ ಮಾಡಿರುತ್ತೇನೆ. 1 ರಿಂದ 4ನೇ ತರಗತಿಯವರೆಗೆ ಕಂಚುಗಾರನಹಳ್ಳಿಯಲ್ಲಿ , 5ನೇ ತರಗತಿಯನ್ನು ಶಿವಮೊಗ್ಗದ ರಿಪ್ಪನ್ ಪೇಟೆಯಲ್ಲಿ , 6 ಮತ್ತು 7 ನೇ ತರಗತಿಯನ್ನು ದಾಗಿನಕಟ್ಟೆ ಗ್ರಾಮದಲ್ಲಿ, 8 ರಿಂದ 10 ನೇ ತರಗತಿಯವರೆಗೆ ಬಸವಾಪಟ್ಟಣದಲ್ಲಿ , ಪ್ರಥಮ ಹಾಗೂ ದ್ವಿತೀಯ ಪಿಯುಸಿ ಸಾಗರಪೇಟೆಯಲ್ಲಿ ವ್ಯಾಸಾಂಗ ಮಾಡಿರುತ್ತೇನೆ. ಐಟಿಐಯನ್ನು ದಾವಣಗೆರೆ ಯಲ್ಲಿ ವ್ಯಾಸಾಂಗ ಮಾಡಿರುತ್ತೇನೆ. 2005-06 ನೇ ಸಾಲಿನಲ್ಲಿ ಐಟಿಐ ವ್ಯಾಸಾಂಗ ಮಾಡಿರುತ್ತೇನೆ. 2015-16 ನೇ ಸಾಲಿನವರೆಗೂ ಕಂಚುಗಾರನಹಳ್ಳಿಯಲ್ಲಿ ವಾಸವಿದ್ದೆ. ಪ್ರಸ್ತುತ ಹೊನ್ನಾಳಿಯಲ್ಲಿ ನಾನು ವಾಸ ಮಾಡುತ್ತಿದ್ದೇನೆ. 2017 ರಿಂದ 2019 ರವರೆಗೆ ಯಾದಗಿರಿಯಲ್ಲಿದ್ದೆ. 2019 ರಿಂದ 2020 ರವರೆಗೆ ನಾನು ಹೊಸಪೇಟೆಯಲ್ಲಿ ವಾಸವಾಗಿದ್ದೆ. ನಂತರ ಹೊನ್ನಾಳಿಯಲ್ಲಿ ನಾನು ವಾಸವಾಗಿದ್ದೇನೆ. ಜನರಲ್ ಪವರ್ ಆಫ್ ಅಟಾರ್ನಿ ನಿಪಿ 36 ರಲ್ಲಿ ಕಂಚುಗಾರನಹಳ್ಳಿಯಲ್ಲಿ ವಾಸ ಎಂದು ನಮೂದಿಸಿರುತ್ತೇನೆ. ಜನರಲ್ ಪವರ್ ಆಫ್ ಅಟಾರ್ನಿ ಯಲ್ಲಿ ಯಾವ ಊರಿನಲ್ಲಿ ವಾಸ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ . ಕೋಟೆಹಾಳ್ ಗ್ರಾಮದಲ್ಲಿ ನಾನು ವಾಸವಾಗಿಲ್ಲ

ಎಂದರೆ ಸರಿ . ಸಾಕ್ಷಿಯು ಮುಂದುವರೆದು ಸದರಿ ಗ್ರಾಮ ನನ್ನ ಅಜ್ಜನ ಊರು ಎಂದು ತಿಳಿಸಿರುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಕೋಟೆಹಾಳ್ ಗ್ರಾಮ ಎಂದು ನಮೂದಾಗಿರುವುದು ತಪ್ಪು ಎಂದರೆ ಸರಿ . ಸಾಕ್ಷಿಯು ಮುಂದುವರೆದು ಕಂಚುಗಾರನಹಳ್ಳಿ ವಾಸ್ತವ್ಯ ಎಂದು ನುಡಿಯುತ್ತಾರೆ.

2. ಪಿಯುಸಿ ಆದ ನಂತರದಲ್ಲಿ ಕಂಚುಗಾರನಹಳ್ಳಿಯಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಕೆ ಎಸ್ ಆರ್ ಟಿ ಸಿ ಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಸದರಿ ಗ್ರಾಮಕ್ಕೆ ಹೋಗಿ ಬರುತ್ತಿದ್ದೆ ಎಂದು ನುಡಿಯುತ್ತಾರೆ. ವಾದಿಯ ಹೆಂಡತಿ ಮರಣ ಹೊಂದಿದ್ದು ವಾದಿಗೆ 1 ಗಂಡು ಹಾಗೂ 2 ಹೆಣ್ಣು ಮಕ್ಕಳಿರುತ್ತಾರೆ. ಕೋಟೆ ಬಸಪ್ಪ ಹಾಗೂ ಅವರ ಮಗ ಬೇರೆ ಬೇರೆ ವಾಸ ಮಾಡುತ್ತಿದ್ದಾರೆ ಎಂದರೆ ಸರಿ . ಕೋಟೆ ಬಸಪ್ಪನನ್ನು ಮಗಳು ಹಾಗೂ ಮೊಮ್ಮಗ ನೋಡಿ ಕೊಳ್ಳುತ್ತಿದ್ದಾರೆ. ಸದರಿ ದಾವೆಯಲ್ಲಿ ಸಾಕ್ಷಿ ಹೇಳಲು ವಾದಿಯ ಮಕ್ಕಳು ಹಾಗೂ ಮೊಮ್ಮಕ್ಕಳನ್ನು ಕಳುಹಿಸಬಹುದಾಗಿತ್ತು ಎಂದರೆ ಸಾಕ್ಷಿಯು ಅವರು ಅವಿದ್ಯಾವಂತರು ಎಂದು ನುಡಿಯುತ್ತಾರೆ. 2021 ನೇ ಸಾಲಿನಲ್ಲಿ ವಾದಿ ದಾವೆ ಸಲ್ಲಿಸುವ ಕಾಲಕ್ಕೆ ನಾನು ನ್ಯಾಯಾಲಯಕ್ಕೆ ಅವರ ಜೊತೆ ಬಂದಿರುತ್ತೇನೆ. ದಾವೆಯ ವಿಷಯವನ್ನು ವಾದಿಯೇ ವಕೀಲರಿಗೆ ತಿಳಿಸಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯು ಪಹಣಿ, ದಾವಣಗೆರೆ ಎಸಿ ರವರ ಆದೇಶ ಪ್ರತಿ , ಮರಣ ಪ್ರಮಾಣ ಪತ್ರ, ಜಮೀನಿನ ಚೆಕ್ಕು ಬಂಧಿ, ತಾಲ್ಲೂಕು ಕಚೇರಿಯಲ್ಲಿ ನೀಡಿದ ತಕರಾರಿನ ಅರ್ಜಿ ಸಲ್ಲಿಸಿರುತ್ತಾರೆ.

3. ಎಸಿ ನ್ಯಾಯಾಲಯದಲ್ಲಿ ಹನುಮಂತಪ್ಪ ಬಿನ್ ಪರಸಪ್ಪ ಮತ್ತು ಎ ಆರ್ ತಿಪ್ಪೇಶಪ್ಪ ಬಿನ್ ರಂಗಪ್ಪ ರವರ ನಡುವೆ ಪ್ರಕರಣ ದಾಖಲಾಗಿರುತ್ತದೆ. ಹನುಮಂತಪ್ಪ ಬಿನ್ ಪರಸಪ್ಪ ರವರಿಗೆ ಸರ್ವೆ ನಂಃ 177 ರಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ರಂಗಪ್ಪ ಬಿನ್ ಹನುಮಪ್ಪ ವಾದಿ ಹಾಗೂ ಪ್ರತಿವಾದಿಯ ಸಂಬಂಧಿ . ರಂಗಪ್ಪ ಬಿನ್

ಹನುಮಪ್ಪನಿಗೂ ಸರ್ವೆ ನಂಃ 177 ರಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ಹಾಗಾಗಿ ಎಸಿ ನ್ಯಾಯಾಲಯದಲ್ಲಿ ಹನುಮಪ್ಪ ಬಿನ್ ಪರಸಪ್ಪ ನವರು ಯಾವ ಉದ್ದೇಶಕ್ಕಾಗಿ ಪ್ರಕರಣ ಸಲ್ಲಿಸಿದ್ದರು ಎಂದರೆ ತಿಪ್ಪೇಶಪ್ಪನವರು ರಂಗಪ್ಪ ಮಾಸ್ಟರ್ ರವರ ಜಮೀನಿನಲ್ಲಿ ಅಕ್ರಮ ಒತ್ತುವರಿ ಮಾಡಿರುತ್ತಾರೆ ಎಂದು ಪ್ರಕರಣ ದಾಖಲಿಸಿರುತ್ತಾರೆ. ಕೆ ಆರ್  ತಿಪ್ಪೇಶಪ್ಪನವರು ಆ ಕಾಲಕ್ಕೆ  ದಾವಾ ಆಸ್ತಿಯಲ್ಲಿ ಅನುಭವದಲ್ಲಿದ್ದರು ಎಂದರೆ ಸರಿ . ತಿಪ್ಪೇಶಪ್ಪನವರ ಆಸ್ತಿಯ ಯಾವ ದಿಕ್ಕಿಗೆ ರಂಗಪ್ಪ ಬಿನ್ ಹನುಮಪ್ಪ ನವರ ಆಸ್ತಿ ಬರುತ್ತದೆ ಎಂದರೆ ಪಶ್ಚಿಮ ದಿಕ್ಕಿಗೆ ಎಂದು ನುಡಿಯುತ್ತಾರೆ.

4. ದಾವಾ ಆಸ್ತಿಯ ಪಶ್ಚಿಮ ಭಾಗಕ್ಕೆ ಕುಳಗಟ್ಟೆ ಮಲ್ಲಪ್ಪನ ಆಸ್ತಿ ಇರುತ್ತದೆ ಎಂದರೆ ಸರಿ . ತಿಪ್ಪೇಶಪ್ಪ ಬಿನ್ ರಂಗಪ್ಪನವರು ಸರ್ವೆ ನಂಃ 177 ರ 4 ಎಕರೆಯಲ್ಲಿ ಅನುಭವದಲ್ಲಿದ್ದು ಆ ಜಮೀನಿಗೆ ರಂಗಪ್ಪ ಬಿನ್ ಹನುಮಪ್ಪನ ಜಮೀನು ಲಗತ್ತಾಗದೇ ಇರುವುದರಿಂದ ಒತ್ತುವರಿ ಮಾಡುವ ಪ್ರಮೇಯ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ತಿಪ್ಪೇಶಪ್ಪನ ಅನುಭವದಲ್ಲಿರುವ ಆಸ್ತಿ ದಾವಾ ಆಸ್ತಿ ಆಗಿದ್ದು ಅದರ ಚೆಕ್ಕುಬಂಧಿ ದಾವಾ ಷೆಡ್ಯೂಲ್ ನಲ್ಲಿ ನಮೂದಿಸಿರುವಂತೆ ಇರುತ್ತದೆ ಎಂದರೆ ಸರಿ . ತಿಪ್ಪೇಶಪ್ಪ ಪ್ರತಿವಾದಿಯ ಗಂಡ. ತಿಪ್ಪೇಶಪ್ಪ 2020 ನೇ ಸಾಲಿನಲ್ಲಿ  ಮರಣ ಹೊಂದಿರುತ್ತಾರೆ.  ತಿಪ್ಪೇಶಪ್ಪ  ಮರಣ ಹೊಂದಿದ ನಂತರ ಅವರ ಅನುಭವದಲ್ಲಿ ಇರುವ ದಾವಾ ಆಸ್ತಿ ಅವರ ಹೆಂಡತಿ ಮತ್ತು ಮಕ್ಕಳು ಅನುಭವಿಸುತ್ತಿದ್ದಾರೆ ಎಂದರೆ ಸರಿ . ಯಥಾಸ್ಥಿತಿ ಪ್ರಕಾರ ದಾವಾ ಸ್ವತ್ತು ಅಡಿಕೆ ತೋಟ ಎಂದರೆ ಸರಿ . ಅಡಿಕೆ ತೋಟಕ್ಕೆ ನೀರಾವರಿ ಮೂಲ ಕೊಳವೆ ಬಾವಿ ಎಂದರೆ ಸರಿ . 1982ನೇ ಸಾಲಿನಿಂದ ದಾವಾ ಆಸ್ತಿಯಲ್ಲಿ  ತಿಪ್ಪೇಶಪ್ಪ ಹಾಗೂ ಆತನ ಸಹೋದರರು ಅನುಭವದಲ್ಲಿದ್ದಾರೆ .  2021 ನೇ ಸಾಲಿನಲ್ಲಿ  1 ಎಕರೆ ಅಡಿಕೆ ತೋಟದ  ಅಂದಾಜು ಬೆಲೆ 15 ರಿಂದ 16 ಲಕ್ಷ. ಸದರಿ ವಿಷಯವನ್ನು ದಾವೆ ದಾಖಲಿಸುವ ಕಾಲಕ್ಕೆ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ.

ಪ್ರತಿವಾದಿ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

sd/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.